CC-O. In Public Domain. Digitized by eGangotri

ಡಾ॥ಜಾಕೀರ್‌ಹುಸೇನ್

ಭಾರತೀಸುತ



Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಡಾ|| ಜಾ ಕೀ ರ್ ಹು ಸೇ ನ್

೧೯೬೭ರ ಮೇ–ಜೂನ್ ತಿಂಗಳಲ್ಲಿ ಮೈಸೂರು ನಗರದಲ್ಲಿ ನಡೆದ
ವಯಸ್ಕರ ಶಿಕ್ಷಣ ಸಾಹಿತ್ಯ ರಚನಾಲಯದಲ್ಲಿ ರಚಿತವಾದುದು

ಭಾರತೀಸುತ

ಕರ್ನಾಟಕ ರಾಜ್ಯ ವಯಸ್ಕರ ಸಮಿತಿ
ಮೈ ಸೂ ರು

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಅನಕ್ಷರಸ್ಥ ವಯಸ್ಕರು ಓದು ಬರಹ ಕಲಿತ ಮಾತ್ರಕ್ಕೆ ವಯಸ್ಕರ ಶಿಕ್ಷಣದ ಪ್ರಗತಿಯಂ ಸಾಧಿಸಿತು ಎಂದು ಲೆಕ್ಕಾಚಾರ ಹಾಕುವುದು ಸರಿಯಲ್ಲ. ಕಲಿತ ಓದನ್ನು ಯಾವ ಮಟ್ಟಕ್ಕೆ ಉಳಿಸಿಕೊಂಡಿದ್ದಾರೆ, ಉಳಿಸಿಕೊಳ್ಳಲು ಯಾವ ಬಗೆಯ ಪ್ರಯತ್ನ ಮಾಡುತ್ತಿದ್ದಾರೆ ಇತ್ಯಾದಿಯ ಬಗ್ಗೆ ವಯಸ್ಕರ ಶಿಕ್ಷಣ ರಂಗದ ಬಗ್ಗೆ ಆಸಕ್ತಿಯಿರುವ ಯಾರೇ ಆಗಲಿ ಇಂದು ಪ್ರಾಮಾಣಿಕವಾಗಿ ಚಿಂತಿಸಬೇಕಾದ, ಆ ದಿಕ್ಕಿನಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯತೆ ಇಂದು ಇದೆ.

ಈ ಹಿನ್ನೆಲೆಯಲ್ಲಿ ವಯಸ್ಕರು ಕಲಿತ ಓದನ್ನು ಉಳಿಸಿಕೊಳ್ಳಲು ಓದಿನ ಮೂಲಕ ಅರಿವು ಮೂಡಿ ಆತನ ಬದುಕು ಪ್ರಗತಿಯ ಕ್ರಿಯಾಶೀಲತೆಯತ್ತ ನಡೆಯಲು ಸಹಾಯಕವಾಗುವಂತೆ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಹೊರತಂದಿರುವ ವಯಸ್ಕರಿಗೆ ಉಪಯುಕ್ತವಾದ ಅವರ ಆಸಕ್ತಿ, ಅಭಿರುಚಿಗೆ ಅನುಗುಣವಾಗಿ ಓದಲು ಸುಲಭವಾದ ಅನುಭವಿ ಲೇಖಕರು ಬರೆದಿರುವ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳಲ್ಲಿ ಈ ಕೃತಿಯೂ ಒಂದು.

ಈಗಾಗಲೇ ಹೊರಬಂದಿರುವ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳಿಂದೇ ಜನಪ್ರಿಯವಾಗಿರುವ, ಓದುಗರಿಂದ, ಸಾಹಿತ್ಯಾಸಕ್ತರಿಂದ ನಾಡಿನಾದ್ಯಾಂತ ಮೆಚ್ಚುಗೆ ಪಡೆದಿರುವ ಈ ಮಾಲಿಕೆಯ ಪುಸ್ತಕಗಳಲ್ಲಿ ಒಂದು ನೂರು ಕೃತಿಗಳ ಪುನರ್‌ಮುದ್ರಣ ಕೈಗೊಳ್ಳಲಾಗಿದೆ. ಈ ಕೃತಿಗಳು ನಮ್ಮ ಉದ್ದೇಶದ ಈಡೇರಿಕೆಯಲ್ಲಿ ಸಫಲವಾಗಬಲ್ಲವು ಎಂಬ ಆಶಯ ನಮ್ಮದು.

ಪ್ರಕಟಣಾ ಕಾರ್ಯದಲ್ಲಿ ಸಹಕರಿಸಿದ ಎಲ್ಲರಿಗೂ ನನ್ನ ವಂದನೆಗಳು.

ದೇವನೂರು ಶಿವಮಲ್ಲು
ಅಧ್ಯಕ್ಷರು
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು.

ದಿನಾಂಕ : 15-11-88

Sri Vidyabharathi Book Centre, Shimoga

CC-O. In Public Domain. Digitized by eGangotri

ಎರಡು ಮಾತು

ಹೊಸದಾಗಿ ಅಕ್ಷರಸ್ಥರಾದ ವಯಸ್ಕರಿಗೆ ಓದಲು ಸರಳವಾದ ಮತ್ತು ಸ್ವಾರಸ್ಯವಾದ ಸಾಹಿತ್ಯವನ್ನು ಒದಗಿಸುವುದು ವಯಸ್ಕರಿಗೆ ಓದು ಬರೆಹ ಕಲಿಸುವುದಕ್ಕಿಂತ ಮುಖ್ಯವಾದುದು. ಇಲ್ಲದಿದ್ದರೆ ವಯಸ್ಕರು ಮತ್ತೆ ಅನಕ್ಷರಸ್ಥರಾಗಿ ಬಿಡುತ್ತಾರೆ. ಹಾಗೆ ಆಗದಂತೆ ಮಾಡಲು ವಯಸ್ಕರ ಶಿಕ್ಷಣ ಸಂಸ್ಥೆಗಳು ವಯಸ್ಕರಿಗೆ ಸೂಕ್ತವಾದ ಸಾಹಿತ್ಯವನ್ನು ರಚಿಸುವ ವ್ಯವಸ್ಥೆ ಗಳನ್ನು ಮಾಡುತ್ತಿವೆ.

ವಯಸ್ಕರ ಮನೋಭಾವ, ಆಸಕ್ತಿ ಮತ್ತು ಅಭಿರುಚಿ, ವಾಚ್ಯಶಕ್ತಿ, ಶಬ್ದಸಂಪತ್ತು–ಇವುಗಳನ್ನು ಗಮನದಲ್ಲಿಟ್ಟುಕೊಂಡು ಸಾಹಿತ್ಯವನ್ನು ರಚಿಸು ವುದು ಸುಲಭವಲ್ಲ. ಈ ಕಲೆ ಒಂದು ಶಾಸ್ತ್ರವಾಗಿಯೇ ಬೆಳೆದಿದೆ, ಬೆಳೆಯು ತ್ತಿದೆ. ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳಲ್ಲಿ ಇದರ ಬಗ್ಗೆ ವಿಶೇಷವಾಗಿ ಸಂಶೋಧನೆ, ಅಧ್ಯಯನಗಳು ನಡೆದಿವೆ, ನಡೆಯುತ್ತಿವೆ. ಇವುಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಕನ್ನಡದಲ್ಲಿ ಶಾಸ್ತ್ರೀಯವಾಗಿ ಸಾಹಿತ್ಯವನ್ನು ರಚಿಸಬೇಕು.

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ರಾಜ್ಯ ಸರಕಾರದ ಶಿಕ್ಷಣ ಇಲಾಖೆಯ ನೆರವಿನೊಡನೆ ಈ ಕಾರ್ಯದಲ್ಲಿ ತೊಡಗಿದೆ. ಲೇಖಕರಿಗೆ ಈ ಬಗ್ಗೆ ಮುಖ್ಯವಾದ ಅಂಶಗಳನ್ನು ತಿಳಿಸುವ ಉದ್ದೇಶದಿಂದ ಸಾಹಿತ್ಯ ರಚನಾಲಯಗಳನ್ನು ಏರ್ಪಡಿಸಿದೆ.

ಮೈಸೂರು ನಗರದಲ್ಲಿ 1967ರ ಮೇ 10 ರಿಂದ ಜೂನ್ 8 ರವರೆಗೆ ಅಂಥ ಒಂದು ಸಾಹಿತ್ಯ ರಚನಾಲಯ ಏರ್ಪಾಡಾಗಿತ್ತು. ಇಪ್ಪತ್ತೊಂದು ಮಂದಿ ಲೇಖಕರು ಈ ರಚನಾಲಯದಲ್ಲಿ ಭಾಗವಹಿಸಿದ್ದರು.

ಅವರು ಹೊಸದಾಗಿ ಓದು ಬರೆಹ ಕಲಿತ ವಯಸ್ಕರಿಗೆ ಶಾಸ್ತ್ರೀಯವಾಗಿ ಪಂತ ಪಂತವಾಗಿ ಕಾರ್ಡು, ಮಡಿಕೆ ಮತ್ತು ಪುಸ್ತಿಕೆಗಳ ರೂಪದಲ್ಲಿ ಸಾಹಿತ್ಯ ವನ್ನು ರಚಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆ ಸಾಹಿತ್ಯ ರಚನಾಲಯದಲ್ಲಿ ತಯಾರಾದ ಪುಸ್ತಕಗಳಲ್ಲಿ ಇದು ಒಂದು ರಚನಾಲಯದ ಪರವಾಗಿ ಇದನ್ನು ತಮ್ಮ ಕೈಯಲ್ಲಿಡಲು ಸಂತೋಷಿಸುತ್ತೇನೆ.

ಎಂ. ಮಲ್ಲಿಕಾರ್ಜುನಸ್ವಾಮಿ
ಅಧ್ಯಕ್ಷ
ವಯಸ್ಕರ ಶಿಕ್ಷಣ ಸಮಿತಿ

ಮೈಸೂರು
29-11-1967

Sri Vidyabharathi Book Centre, Sringeri

CC-O. In Public Domain. Digitized by eGangotri

ಡಾಕ್ಟರ್ ಜಾಕೀರ್‌ಹುಸೇನ್

ಅಂದು ಸಿದ್ದಣ್ಣ ಪೇಟೆಗೆ ಹೋಗಿದ್ದ. ಅವನು ತನ್ನ ಕೆಲಸ ಕಾರ್ಯಗಳನ್ನು ಮುಗಿಸಿದ. ಮಾಮೂಲಿನಂತೆ ಹೋಟೆಲಿನ ಒಳಗೆ ನುಗ್ಗಿದ.

ಸಿದ್ದಣ್ಣನ ಹಳ್ಳಿಯಲ್ಲಿ ಶಾಲೆ ಇದೆ. ರಾಗಣ್ಣ ಆ ಶಾಲೆಯ ಉಪಾಧ್ಯಾಯರು. ಅವರೂ ಆ ದಿನ ಪೇಟೆಗೆ ಬಂದಿದ್ದರು. ಅವರೂ ಕಾಫಿ ಕುಡಿಯಲು ಆ ಹೋಟೆಲಿಗೆ ಬಂದಿದ್ದರು.

"ಇಲ್ಲಿ ಬನ್ನಿ ಸ್ವಾಮಿ" ಎಂದು ಸಿದ್ದಣ್ಣ ಅವರನ್ನು ಕರೆದ.

ರಾಗಣ್ಣ ಬಂದರು. ಅವನ ಹತ್ತಿರ ಕೂತರು. ಇಬ್ಬರೂ ಉಪಾಹಾರ ಮೂಡತೊಡಗಿದರು.

ಆಗ ಆಕಾಶವಾಣಿ ಸುದ್ದಿಯೊಂದನ್ನು ಸಾರಿತು. ಅದು ವಿಶೇಷವಾದ ಸುದ್ದಿ. ಆ ವಿಶೇಷ ಸುದ್ದಿಯನ್ನು ಜನರು ಆತುರದಿಂದ ಕೇಳುತ್ತಿದ್ದರು.

ಆಕಾಶವಾಣಿ "ರಾಷ್ಟ್ರಪತಿಗಳ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಡಾಕ್ಟರ್ ಜಾಕೀರ್ ಹುಸೇನರು ಆಯ್ಕೆ ಆದರು" ಎಂದು ಹೇಳಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿದ್ದಣ್ಣನಿಗೆ ರಾಷ್ಟ್ರಪತಿಗಳ ಸ್ಥಾನಕ್ಕೆ ನಡೆದ ಚುನಾವಣೆಯ ಸಂಗತಿ ತಿಳಿಯದು. ಅವನು "ಸ್ವಾಮಿ ರಾಷ್ಟ್ರಪತಿಗಳ ಚುನಾವಣೆ ಎಂದರೆ ಏನು?" ಎಂದು ಕೇಳಿದ.

"ನೋಡು ಸಿದ್ದಣ್ಣ, ರಾಷ್ಟ್ರಪತಿಗಳ ಪದವಿ ಎಂದರೆ ಬಹಳ ದೊಡ್ಡ ಪದವಿ. ಅವರೇ ಹೈಕೋರ್ಟುಗಳ ನ್ಯಾಯಾಧೀಶರನ್ನು ನೇಮಿಸುತ್ತಾರೆ. ರಾಜ್ಯಗಳ ರಾಜ್ಯಪಾಲರನ್ನು ನೇಮಿಸುತ್ತಾರೆ" ಎಂದು ರಾಗಣ್ಣನವರು ಹೇಳಿದರು.

"ನಮ್ಮ ದೇಶಕ್ಕೆ ಒಬ್ಬ ಪ್ರಧಾನ ಮಂತ್ರಿ ಇದ್ದಾರೆ. ಅಲ್ಲವೆ? ಅವರಿಗೂ ರಾಷ್ಟ್ರಪತಿಗಳಿಗೂ ಏನು ವ್ಯತ್ಯಾಸ? ಯಾರು ಮೇಲು?" ಎಂದು ಕೇಳಿದ ಸಿದ್ದಣ್ಣ.

"ಸಿದ್ದಣ್ಣ, ಹೇಳುತ್ತೇನೆ ಕೇಳು." ರಾಗಣ್ಣನವರು ಉತ್ತರ ಕೊಟ್ಟರು: "ರಾಷ್ಟ್ರಪತಿಗಳ ಸ್ಥಾನ ಅತ್ಯಂತ ದೊಡ್ಡ ಪದವಿ ಎಂದು ಆಗಲೇ ಹೇಳಿದೆನಲ್ಲ. ಅವರು ಲೋಕಸಭೆಯಲ್ಲಿ ಬಹುಮತ ಪಡೆದ ಪಕ್ಷದ ನಾಯಕನನ್ನು ಕರೆಯುತ್ತಾರೆ. ಆತನನ್ನು ಪ್ರಧಾನ ಮಂತ್ರಿಯನ್ನಾಗಿ ನೇಮಿಸುತ್ತಾರೆ. ಆ ಪ್ರಧಾನ ಮಂತ್ರಿಯ ಸಲಹೆಯಂತೆ ಉಳಿದ ಮಂತ್ರಿಗಳನ್ನು ನೇಮಿಸುತ್ತಾರೆ. ಅವರು ಮಂತ್ರಿ ಮಂಡಲದ ಸಲಹೆಯಂತೆ ರಾಜ್ಯಭಾರ ಮಾಡುತ್ತಾರೆ."

"ಸ್ವಾಮಿ, ನನಗೊಂದು ಸಂದೇಹ" ಸಿದ್ದಣ್ಣ

CC-O. Sri Vidyaranya Math Book Centre, Sringeri

CC-O. In Public Domain. Digitized by eGangotri

ನಡುವೆ ಬಾಯಿ ಹಾಕಿದ: "ರಾಷ್ಟ್ರಪತಿಗಳು ಮಂತ್ರಿ ಮಂಡಲದ ಸಲಹೆ ತೆಗೆದುಕೊಳ್ಳದೆ ರಾಜ್ಯಭಾರ ನಡೆಸುವುದಿಲ್ಲ" ಅಲ್ಲವೇ.

"ನೋಡು, ತುರ್ತು ಪರಿಸ್ಥಿತಿ ಬಂತು ಎಂದು ನೀನು ತಿಳಿದುಕೋ. ಆಗ ರಾಷ್ಟ್ರಪತಿಗಳು ಮಂತ್ರಿ ಮಂಡಲವನ್ನು ರದ್ದು ಮಾಡುವರು. ತಾವೇ ಅಧಿಕಾರ ವಹಿಸಿಕೊಳ್ಳುವರು. ನಮ್ಮ ದೇಶದ ರಕ್ಷಣೆಗೆ ಸೈನ್ಯ ಗಳಿವೆ. ಅಲ್ಲವೇ ? ರಾಷ್ಟ್ರಪತಿಗಳು ಆ ಸೈನ್ಯಗಳ ಮುಖ್ಯ ಅಧಿಕಾರಿಗಳೂ ಹೌದು."

"ನೋಡಿ ಸ್ವಾಮಿ" ಸಿದ್ದಣ್ಣ ಹೇಳಿದ: "ನನಗೆ ಒಂದು ಸಂದೇಹ. ನೀವು ರಾಷ್ಟ್ರಪತಿಗಳ ಸ್ಥಾನಕ್ಕೆ ಚುನಾವಣೆ ಎಂದಿರಿ. ನಾನು ಈ ದೇಶದ ಪ್ರಜೆ ಅಲ್ಲವೇ ? ಮೊನ್ನೆ ನಡೆದ ಚುನಾವಣೆಯಲ್ಲಿ ಓಟು ಮಾಡಿದ್ದೇನೆ. ಆದರೆ ರಾಷ್ಟ್ರಪತಿಗಳ ಚುನಾವಣೆ ನಡೆಯುತ್ತದೆ, ಓಟು ಕೊಡಬೇಕು ಎಂದು ನಮಗೆ ತಿಳಿಸಲೇ ಇಲ್ಲ. ನಾವು ಓಟು ಕೊಡದೆ ಅವರು ಹೇಗೆ ಆಯ್ಕೆ ಆದರು ?"

"ಸಿದ್ದಣ್ಣ ನಾವೆಲ್ಲ ಈ ದೇಶದ ಪ್ರಜೆಗಳು. ಇದು ನಿಜ" ರಾಗಣ್ಣನವರು ಹೇಳಿದರು: "ಆದರೆ ಪ್ರಜೆಗಳು ರಾಷ್ಟ್ರಪತಿಗಳನ್ನು ನೇರವಾಗಿ ಆರಿಸುವುದಿಲ್ಲ."

"ಸ್ವಾಮಿ, ಅವರನ್ನು ಯಾರು ಆರಿಸುತ್ತಾರೆ ?" ಎಂದ ಸಿದ್ದಣ್ಣ

Sri Vidyabharathi Book Centre, Sringeri

CC-O. In Public Domain. Digitized by eGangotri

"ಮೊನ್ನೆ ಒಂದು ದೊಡ್ಡ ಚುನಾವಣೆ ನಡೆಯಿತು. ಅಲ್ಲವೆ ?"

"ಹೌದು. ನಾವು ವಿಧಾನಸಭೆಗೂ ಲೋಕ ಸಭೆಗೂ ಓಟು ಕೊಟ್ಟೆವು. ನಮ್ಮ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಿದೆವು" ಎಂದು ನುಡಿದ ಸಿದ್ದಣ್ಣ.

"ಸರಿಯಾಗಿ ಹೇಳಿದೆ" ರಾಗಣ್ಣನವರು ಅಂದರು: "ರಾಜ್ಯದಲ್ಲಿ ವಿಧಾನಸಭೆ ಇದೆ. ದೇಶಕ್ಕೆ ಲೋಕಸಭೆ ಮತ್ತು ರಾಜ್ಯ ಸಭೆಗಳು ಇವೆ. ಈ ಸಭೆಗಳಲ್ಲಿ ನಮ್ಮ ಪ್ರತಿನಿಧಿಗಳು ಇದ್ದಾರೆ. ಅಲ್ಲವೇ ? ಈ ಪ್ರತಿನಿಧಿಗಳು ಓಟು ಕೊಟ್ಟು ರಾಷ್ಟ್ರಪತಿಗಳನ್ನು ಆರಿಸುತ್ತಾರೆ. ಈ ಚುನಾವಣೆಯಲ್ಲಿ ಡಾಕ್ಟರ್ ಜಾಕೀರ್ ಹುಸೇನರಿಗೆ ಹೆಚ್ಚು ಓಟುಗಳು ದೊರಕಿದವು. ಅವರು ಐದು ವರ್ಷಗಳ ಕಾಲ ನಮ್ಮ ರಾಷ್ಟ್ರಪತಿಗಳು."

ಇಬ್ಬರೂ ಉಪಹಾರ ಮುಗಿಸಿದರು. ಅವರು ಹೋಟೆಲಿನಿಂದ ಹೊರಬಂದರು. ಸಿದ್ದಣ್ಣ "ಸ್ವಾಮಿ, ಜಾಕೀರ್ ಹುಸೇನರು ಎಂದರೆ ಯಾರು ?" ಎಂದು ಕೇಳಿದ.

"ಅವರು ಬಹಳ ದೊಡ್ಡ ಮನುಷ್ಯರು. ರಾಷ್ಟ್ರಪತಿಗಳಿಗೆ ಅವರ ಕೆಲಸಗಳಲ್ಲಿ ಸಹಾಯಮಾಡಲು ಒಬ್ಬರು ಇದ್ದಾರೆ. ಅವರೇ ಉಪರಾಷ್ಟ್ರಪತಿಗಳು. ಉಪರಾಷ್ಟ್ರಪತಿಗಳನ್ನು ಲೋಕಸಭೆ ಮತ್ತು ರಾಜ್ಯಸಭೆಗಳ ಸದಸ್ಯರು

CC-O. In Public Domain. Digitized by eGangotri

ಆರಿಸುತ್ತಾರೆ. ಅವರು 1962 ರಲ್ಲಿ ಜಾಕೀರ್ ಹುಸೇನರನ್ನು ಈ ಪದವಿಗೆ ಆರಿಸಿದರು. ಅವರು ಐದು ವರ್ಷಗಳ ಕಾಲ ಉಪರಾಷ್ಟ್ರಪತಿ ಆಗಿದ್ದರು."

"ಅದು ಸರಿ ಸ್ವಾಮಿ" ಸಿದ್ದಣ್ಣ ಹೇಳಿದ "ಅವರನ್ನೇ ಏಕೆ ರಾಷ್ಟ್ರಪತಿಯನ್ನಾಗಿ ಆರಿಸಿದರು?"

"ಸಿದ್ದಣ್ಣ ನೀನು ಒಳ್ಳೆಯ ಪ್ರಶ್ನೆಯನ್ನೇ ಕೇಳಿದೆ. ನಮ್ಮ ರಾಷ್ಟ್ರಪತಿಗಳ ವಿಚಾರ ನಾವು ತಿಳಿಯಬೇಡವೇ? ಅವರು ಹಿಂದೆ ಮಾಡಿದ ಕೆಲಸಗಳನ್ನು ನಾವು ಅರಿತಿರಬೇಕು."

"ನೀವು ತಿಳಿದವರು. ನೀವು ಅವರ ವಿಚಾರ ಸ್ವಲ್ಪ ತಿಳಿಸಿಕೊಡಿ."

"ನೋಡು ಜಾಕೀರ್ ಹುಸೇನರು 83 ವರ್ಷಗಳ ಹಿಂದೆ ಹುಟ್ಟಿದರು. ಅವರು ಹುಟ್ಟಿದುದು ಹೈದರಾಬಾದಿನಲ್ಲಿ. ಅವರ ತಂದೆ ಒಬ್ಬ ವಕೀಲರು. ಜಾಕೀರ್ ಹುಸೇನರು ಅಲಿಗಡ ವಿಶ್ವವಿದ್ಯಾನಿಲಯದಲ್ಲಿ ಓದು ಕಲಿತರು. ಅಲಿಗಡ ವಿಶ್ವವಿದ್ಯಾನಿಲಯ ನಮ್ಮ ದೇಶದ ಉತ್ತರ ಭಾಗದಲ್ಲಿ ಇದೆ. ಮೊದಲಿನಿಂದಲೂ ಅವರಿಗೆ ಡಾಕ್ಟರು ಆಗಬೇಕು ಎಂದು ಆಸೆ. ಆದರೆ ಅವರ ಆಸೆಗೆ ಒಂದು ಆತಂಕ ಬಂತು."

"ಏನು ಆತಂಕ ಸ್ವಾಮಿ?" ಎಂದು ಸಿದ್ದಣ್ಣ ನಡುವೆ ಬಾಯಿ ಹಾಕಿದ.

CC-O. Vasishtha Tripathi Book Centre, Sringeri

CC-O. In Public Domain. Digitized by eGangotri

"ಅಲಿಗಡ ವಿಶ್ವವಿದ್ಯಾನಿಲಯದ ಹತ್ತಿರ ಒಂದು ನದಿ ಇದೆ. ಅದರ ಹೆಸರು ಗೋಮತಿ. ಗೋಮತಿ ನದಿಯಲ್ಲಿ ನೆರೆ ಬಂತು. ಅದು ಉಕ್ಕಿ ಹರಿಯಿತು. ಸಾವಿರಾರು ಜನರು ಸಂಕಟಕ್ಕೆ ಒಳಗಾದರು. ಮನೆ ಮಠ ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡರು. ಜಾಕೀರ್‌ಹುಸೇನರ ಮನಸ್ಸು ಬಹಳ ಮೃದು. ಜನರ ಸಂಕಟದ ಕತೆ ಅವರ ಕಿವಿಗೆ ಬಿದ್ದಿತು. ಅವರು ನೊಂದ ಜನರಿಗೆ ಸಹಾಯ ಮಾಡಲು ಮುಂದೆ ಬಂದರು. ಅವರು ಪರಿಹಾರ ಕೆಲಸಗಳಿಗೆ ಕೈ ಹಾಕಿದರು. ಅವರು ಬಿಡುವು ಇಲ್ಲದೆ ದುಡಿದರು. ಈ ದುಡಿತ ಅವರ ಆರೋಗ್ಯವನ್ನು ಕೆಡಿಸಿತು. ಅವರು ಕಾಯಿಲೆ ಬಿದ್ದರು. ಅವರು ಓದು ನಿಲ್ಲಿಸಬೇಕಾಯಿತು. ಅವರಿಗೆ ಇಬ್ಬರು ಅಣ್ಣಂದಿರು ಇದ್ದರು. ಈ ಅಣ್ಣಂದಿರು ಕ್ಷಯ ರೋಗದಿಂದ ಮಡಿದಿದ್ದರು. ಆ ಕೆಟ್ಟ ಕಾಯಿಲೆ ಜಾಕೀರ್ ಹುಸೇನರಿಗೆ ಅಂಟೀತು ಎಂಬ ಹೆದರಿಕೆ ಡಾಕ್ಟರಿಗೆ ಹುಟ್ಟಿತು. ಅವರು "ನೀನು ಓದು ನಿಲ್ಲಿಸುವುದು ಲೇಸು" ಎಂದು ಹೇಳಿದರು.

"ಡಾಗಣ್ಣನವರೇ, ಜಾಕೀರ್ ಹುಸೇನರು ಓದು ನಿಲ್ಲಿಸಿದರೇ ?" ಸಿದ್ದಣ್ಣ ನಡುವೆ ಬಾಯಿ ಹಾಕಿದ.

"ಇಲ್ಲ. ಜಾಕೀರ್ ಹುಸೇನರು ಹಟವಾದಿ. ವಿದ್ಯೆಯಲ್ಲಿ ಅವರಿಗೆ ಬಹಳ ಆಸಕ್ತಿ. ಅವರು ಡಾಕ್ಟರ ಮಾತುಗಳನ್ನು ಕೇಳಲಿಲ್ಲ. ಅವರು ಮುಂದೆ ಆಗಿನ ವಿಶ್ವವಿದ್ಯಾ

Sri Vidyabharathi Book Centre, Mangalore

CC-O. In Public Domain. Digitized by eGangotri

ನಿಲಯವನ್ನು ಸೇರಿದರು. ಅವರಿಗೆ ವೈದ್ಯಶಾಸ್ತ್ರವನ್ನು ಕಲಿಯಲು ಆಗಲಿಲ್ಲ. ಅವರು ಅರ್ಥಶಾಸ್ತ್ರ ಮತ್ತು ತತ್ವ ಶಾಸ್ತ್ರಗಳನ್ನು ಆರಿಸಿಕೊಂಡು ಕಲಿತರು. ಆದರೆ ಅಷ್ಟರಲ್ಲಿ ಓದಿಗೆ ಹೊಸ ಆತಂಕ ಬಂತು."

"ಏನು ಸ್ವಾಮಿ ಆ ಆತಂಕ?" ಸಿದ್ದಣ್ಣ ಕೇಳಿದ.

"ಸಿದ್ದಣ್ಣ, ನೀನು ಗಾಂಧೀಜಿಯವರ ಹೆಸರು ಕೇಳಿರುವೆ. ಅಲ್ಲವೇ?"

"ಎಂತಹ ಮಾತು ಸ್ವಾಮಿ! ಅವರ ಹೆಸರು ಕೇಳದೆ ಇರುವವರು ಯಾರು ಇದ್ದಾರೆ? ಅವರೇ ಅಲ್ಲವೇ ನಮಗೆ ಸ್ವರಾಜ್ಯ ಕೊಡಿಸಿದವರು."

"ನೀನು ಹೇಳಿದುದು ನಿಜ." ರಂಗಣ್ಣನವರು ಮಾತು ಮುಂದುವರಿಸಿದರು. 59 ವರ್ಷಗಳ ಹಿಂದಿನ ಮಾತು ಇದು. ಗಾಂಧೀಜಿ ಸ್ವರಾಜ್ಯ ಬೇಕು ಎಂದು ಒಂದು ಚಳುವಳಿ ಹೂಡಿದರು. ಈ ಚಳುವಳಿಗೆ ಅಸಹಕಾರ ಚಳುವಳಿ ಎಂದು ಹೆಸರು. ವಿದ್ಯಾರ್ಥಿಗಳು ಎಲ್ಲಾ ಶಾಲೆ ಕಾಲೇಜುಗಳನ್ನು ಬಿಟ್ಟು ಹೊರ ಬರಬೇಕು ಎಂಬುದು ಈ ಚಳುವಳಿಯ ಒಂದು ಭಾಗ. ವಿದ್ಯಾರ್ಥಿಗಳು ಗಾಂಧಿಜೀಯ ಕರೆಯನ್ನು ಕೇಳಿದರು. ಅವರು ಸಾವಿರ ಸಂಖ್ಯೆಯಲ್ಲಿ ಹೊರಬಂದರು. ಜಾಕೀರ್‌ಹುಸೇನರಿಗೆ ತಮ್ಮ ದೇಶ ಎಂದರೆ ಪ್ರಾಣ. ಅವರಿಗೆ

Sri Vidyaniketan Book Centre, Shagan

CC-O. In Public Domain. Digitized by eGangotri

ಗಾಂಧೀಜಿಯ ಮಾತು ಸರಿ ಕಂಡಿತು. ಅವರು ಕಾಲೇಜು ಬಿಟ್ಟು ಹೊರಬಂದರು."

ಅಯ್ಯೋ, ಪಾಪ! ಅವರ ಓದು ಅರ್ಧಕ್ಕೆ ನಿಂತು ಹೋಯಿತೇ ?" ಸಿದ್ದಣ್ಣ ಹೇಳಿದ. "ಅವರು ಮುಂದೇನು ಮಾಡಿದರು ?"

"ಗಾಂಧೀಜಿ ತುಂಬಾ ತಿಳಿದವರು. ಭಾರತ ನಮ್ಮ ಹುಟ್ಟುನಾಡು. ಆ ದೇಶವನ್ನು ನಾವು ಪ್ರೀತಿಸಬೇಡವೇ ? ಹುಟ್ಟುನಾಡನ್ನು ಪ್ರೀತಿಸುವುದನ್ನು ಕಲಿಸುವ ವಿದ್ಯೆ ಬೇಕು" ಎಂದು ಅವರು ಹೇಳಿದರು. ಹುಡುಗರು ಪರರನ್ನು ಆಶ್ರಯಿಸಬಾರದು. ತಮ್ಮ ಕಾಲ ಮೇಲೆ ತಾವು ನಿಲ್ಲುವ ವಿದ್ಯೆಯನ್ನು ಕಲಿಯಬೇಕು ಎಂದು ಗಾಂಧೀಜಿ ನುಡಿದರು. ಈ ಬಗೆಯ ವಿದ್ಯೆಯನ್ನು ರಾಷ್ಟ್ರೀಯ ಶಿಕ್ಷಣ ಎಂದು ಅವರು ಕರೆದರು. ರಾಷ್ಟ್ರೀಯ ಶಿಕ್ಷಣವನ್ನು ಕೊಡಲು ಶಾಲೆ ಮತ್ತು ಕಾಲೇಜುಗಳು ಬೇಡವೇ ? ಆ ಸಲುವಾಗಿ ಅನೇಕ ಶಾಲೆ ಮತ್ತು ಕಾಲೇಜುಗಳನ್ನು ತೆರೆದರು. ಗಾಂಧೀಜಿಯ ಈ ಕೆಲಸ ಜಾಕೀರ್ ಹುಸೇನರಿಗೆ ತುಂಬಾ ಮೆಚ್ಚಿಕೆ ಆಯಿತು. ಅವರು ಜಾಮಿಯಮಿಲಿಯ ಎಂಬ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯನ್ನು ಸೇರಿದರು. ಅವರು ಈ ಸಂಸ್ಥೆಯಲ್ಲಿ ಉಪಾಧ್ಯಾಯರಾಗಿ ದುಡಿದರು. ಅಲ್ಲಿ ಕಲಿಯುತ್ತಿದ್ದ ಹುಡುಗರಲ್ಲಿ ದೇಶಪ್ರೇಮವನ್ನು ಬಿತ್ತಿದರು. ಆ ಹುಡುಗರು ದೇಶದ ಸಲುವಾಗಿ ದುಡಿಯುವಂತೆ ಮಾಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಜ್ಞಾನವನ್ನು ಗಳಿಸಲು ಜಾಕೀರ್ ಹುಸೇನರಿಗೆ ಬಹಳ ಆಸಕ್ತಿ. ಕಾಲ ಕಳೆದಂತೆ ಅವರ ಈ ಆಸಕ್ತಿ ಹೆಚ್ಚಿತು. ಕೊನೆಗೆ ಅವರು ಜರ್ಮನಿಗೆ ಹೋದರು. ಅವರು ಬರ್ಲಿನ್ ವಿಶ್ವವಿದ್ಯಾನಿಲಯವನ್ನು ಸೇರಿದರು. ಅಲ್ಲಿ ವ್ಯಾಸಂಗ ಮಾಡಿದರು. ಜ್ಞಾನದ ಹಂಬಲವನ್ನು ತಣಿಸಿಕೊಂಡರು. ಮೂರು ವರ್ಷ ಅವರು ಬರ್ಲಿನಿನಲ್ಲಿ ವ್ಯಾಸಂಗ ಮಾಡಿದರು. 'ಅವರು ಡಾಕ್ಟರ್ ಆಫ್ ಲಿಟರೇಚರ್' ಎಂಬ ಪದವಿಯನ್ನು ಗಳಿಸಿದರು. ವ್ಯಾಸಂಗ ಮುಗಿಯಿತು. ಅವರು ಸ್ವದೇಶಕ್ಕೆ ಮರಳಿದರು."

"ಸ್ವಾಮಿ, ಅವರು ನಮ್ಮ ದೇಶಕ್ಕೆ ಮರಳಿದರು" ಸಿದ್ದಣ್ಣ ಕೇಳಿದ: "ಆಗ ಅವರಿಗೆ ಬಹಳ ದೊಡ್ಡ ಕೆಲಸ ದೊರೆತು ಇರಬಹುದು ಅಲ್ಲವೇ?"

ಜಾಕೀರ್ ಹುಸೇನರು ಪದವಿಗೆ ಆಸೆ ಪಡಲಿಲ್ಲ. ಅಧಿಕಾರಕ್ಕೆ ಆಸೆ ಪಡಲಿಲ್ಲ. ಐಶ್ವರ್ಯಕ್ಕೆ ಆಸೆ ಪಡಲಿಲ್ಲ. ದೇಶದ ಸಲುವಾಗಿ ದುಡಿಯಬೇಕು ಎಂಬ ಹಂಬಲ ಅವರಿಗೆ. ಅವರು ಸ್ವದೇಶಕ್ಕೆ ಬಂದರು. ಗಾಂಧೀಜಿಯನ್ನು ಕಂಡರು. "ನಾನು ಮುಂದೆ ಮಾಡಬೇಕಾದ ಕೆಲಸ ಏನು?" ಎಂದು ಕೇಳಿದರು. ಆಗ ದೆಹಲಿಯಲ್ಲಿ ಜಾಮಿಯಮಿಲಿಯ ಎಂಬ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಇತ್ತು. ಈ ಸಂಸ್ಥೆಯನ್ನು ಹಕೀಂ ಅಜಮಲ್ ಖಾನರು ಎಂಬ ಮುಂದಾಳು ಕಟ್ಟಿದರು. ಅವರೇ ಜಾಮಿಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಿಲಿಯದ ಉಪಕುಲಪತಿಗಳು. ಗಾಂಧೀಜಿ "ನೀನು ಜಾಮಿಯ ಮಿಲಿಯ ಸಂಸ್ಥೆಯನ್ನು ಸೇರು. ನಾಳೆಯ



ಆವರು ಜಾಮಿಯ ಮಿಲಿಯ ಸಂಸ್ಥೆಯಲ್ಲಿ ಉಪಾಧ್ಯಾಯರಾಗಿ ದುಡಿದರು.

ಪ್ರಜೆಗಳಿಗೆ ರಾಷ್ಟ್ರೀಯ ಶಿಕ್ಷಣ ಕೊಡು" ಎಂದು ಹೇಳಿದರು. ಗಾಂಧೀಜಿಯ ಮಾತು ಅವರಿಗೆ ಒಪ್ಪಿಗೆ ಆಯಿತು. ಅವರು ಜಾಮಿಯಮಿಲಿಯ ಸಂಸ್ಥೆಯನ್ನು ಸೇರಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆ ಸಂಸ್ಥೆಯನ್ನು ಬೆಳೆಸಲು ದುಡಿದರು. ಅಜಮಲ್ ಖಾನರು ಕಾಲವಾದರು. ಆಗ ಜಾಕೀರ್ ಹುಸೇನರು ಜಾಮಿಯಮಿಲಿಯದ ಉಪಕುಲಪತಿಗಳು ಆದರು.

"ಜಾಕೀರ್ ಹುಸೇನರಿಗೆ ಆಗ 29 ವರ್ಷ ಪ್ರಾಯ. ಎಳೆಯ ಪ್ರಾಯದಲ್ಲಿಯೇ ಅವರು ಉಪಕುಲಪತಿಯ ಪದವಿಗೆ ಏರಿದರು. ಪದವಿ ಏನೋ ಬಹಳ ದೊಡ್ಡದು. ಆದರೆ ಅವರಿಗೆ ದೊರೆಯುತ್ತಿದ್ದ ಸಂಬಳ ಬಹಳ ಕಡಿಮೆ. ಅದು ಅವರ ಸಂಸಾರ ವೆಚ್ಚಕ್ಕೂ ಸಾಲುತ್ತಿರಲಿಲ್ಲ. ಆದರೆ ಅವರು ಬೇಸರ ಪಟ್ಟುಕೊಳ್ಳಲಿಲ್ಲ. ಅವರು ಹಣಕ್ಕಿಂತಲೂ ವಿದ್ಯೆ ಹೆಚ್ಚು ಎಂದು ತಿಳಿದರು. ಅವರು ಸಂತಸದಿಂದ ವಿದ್ಯಾರ್ಥಿಗಳಿಗೆ ಜ್ಞಾನದಾನ ಮಾಡಿದರು. ಕೆಲವು ಸಲ ಅವರೇ ನೌಕರನ ಕೆಲಸ ಮಾಡಬೇಕಾಗುತ್ತಿತ್ತು."

"ಗಾಂಧೀಜಿ ಬಹಳ ಮುಂದಾಲೋಚನೆ ಉಳ್ಳವರು." ರಾಗಣ್ಣನವರು ಮಾತು ಮುಂದುವರಿಸಿದರು: "ನಮಗೆ ಸ್ವರಾಜ್ಯ ದೊರೆಯುವುದು ಎಂದು ಅವರು ನಂಬಿದ್ದರು. ಮುಂದೆ ನಮ್ಮ ದೇಶ ಹೇಗೆ ಇರಬೇಕು ಎಂದು ಅವರು ಕನಸು ಕಾಣುತ್ತಿದ್ದರು. ಇಂಗ್ಲಿಷರು ತಮ್ಮ ದೇಶದ ಶಿಕ್ಷಣ ಕ್ರಮವನ್ನು ಈ ದೇಶದಲ್ಲಿ ಜಾರಿಗೆ ತಂದಿದ್ದರು. ಈ ಶಿಕ್ಷಣ ಕ್ರಮ ಗಾಂಧೀಜಿಗೆ ಮೆಚ್ಚುಗೆ ಆಗಿರಲಿಲ್ಲ. ಇದು ನೌಕರರನ್ನು ತಯಾರಿಸುವ ವಿದ್ಯೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಅವರು ಹೇಳಿದರು. ನಮ್ಮ ದೇಶದ ಹುಡುಗರು ತಮ್ಮ ಕಾಲ ಮೇಲೆ ನಿಲ್ಲಬೇಕು. ಅಲ್ಲವೇ? ಇವನ್ನು ಇಂಗ್ಲಿಷರ ಶಿಕ್ಷಣ ಕ್ರಮ ಕಲಿಸುವುದಿಲ್ಲ. ಮಕ್ಕಳಲ್ಲಿ ಹೆಚ್ಚಿನವರು ಹಳ್ಳಿಗಳಲ್ಲಿ ವಾಸಮಾಡುವರು. ಅವರಿಗೆ ತಕ್ಕುದಾದ ವಿದ್ಯೆ ಬೇಕು ಎಂದು ಗಾಂಧೀಜಿ ಆಲೋಚಿಸಿದರು. ಹೊಸ ಶಿಕ್ಷಣಕ್ರಮ ಒಂದನ್ನು ದೇಶದ ಮುಂದೆ ಇಡಬೇಕು ಎಂದು ಅವರು ಆಲೋಚಿಸಿದರು."

"ಹೊಸ ಶಿಕ್ಷಣಕ್ರಮ ಹೇಗೆ ಇರಬೇಕು? ಇದಕ್ಕೆ ಒಂದು ಯೋಜನೆ ಬೇಡವೆ? ಆ ಸಲುವಾಗಿ ಗಾಂಧೀಜಿ ಒಂದು ಸಮಿತಿಯನ್ನು ಆರಿಸಿದರು. ಈ ಸಮಿತಿಗೆ ಯಾರು ಅಧ್ಯಕ್ಷರು ಆಗಬೇಕು? ಜಾಕೀರ್ ಹುಸೇನರು ಶಿಕ್ಷಣದಲ್ಲಿ ನುರಿತವರು. ರಾಷ್ಟ್ರೀಯ ಶಿಕ್ಷಣದಲ್ಲಿ ಅವರಿಗೆ ಇದ್ದ ಜ್ಞಾನ ಅಪಾರ. ಈ ಸಮಿತಿಗೆ ಅಧ್ಯಕ್ಷರು ಆಗಬೇಕು ಎಂದು ಗಾಂಧೀಜಿ ಜಾಕೀರ್‌ಹುಸೇನರನ್ನು ಕೇಳಿಕೊಂಡರು. ಅವರು ಗಾಂಧೀಜಿಯ ಮಾತಿಗೆ ಒಲ್ಲೆ ಎನ್ನಲಿಲ್ಲ. ಅವರು ಗಾಂಧೀಜಿ ಒಪ್ಪಿಸಿದ ಕೆಲಸಕ್ಕೆ ಹೆಗಲು ಒಡ್ಡಿದರು. ಹೊಸ ಶಿಕ್ಷಣ ಕ್ರಮವನ್ನು ಕಷ್ಟಪಟ್ಟು ತಯಾರಿಸಿದರು. ಈ ಶಿಕ್ಷಣ ಕ್ರಮಕ್ಕೆ ಜೀವನ ಶಿಕ್ಷಣ ಕ್ರಮ ಎಂದು ಹೆಸರು. ಹುಡುಗರು ಕೈಕೆಲಸಗಳನ್ನು ಮಾಡಬೇಕು. ಕೆಲಸ ಮಾಡುವುದರ ಮೂಲಕ ವಿದ್ಯೆ ಕಲಿಯಬೇಕು. ಇದು ಜೀವನ ಶಿಕ್ಷಣದ ತತ್ವ."

CC-O. Sri Vidyabharathi Book Centre, Sringeri

CC-O. In Public Domain. Digitized by eGangotri

"ಸ್ವಾಮಿ, ಈಗ ಈ ಕ್ರಮ ನಮ್ಮ ಊರ ಶಾಲೆಗೂ ಬಂದಿದೆ. ಅಲ್ಲವೇ ? ಶಾಲೆಯಲ್ಲಿ ನೂಲುವುದು, ನೇಯುವುದು ತೋಟಗಾರಿಕೆ, ಇವನ್ನು ಕಲಿಸುತ್ತಿದ್ದಾರಂತೆ. ಹಾಗೆ ನಮ್ಮ ಹುಡುಗ ಮಲ್ಲಣ್ಣ ಹೇಳುತ್ತಿದ್ದ " ಎಂದು ನುಡಿದ ಸಿದ್ದಣ್ಣ.

"ಹೌದು." ರಾಗಣ್ಣನವರು ಹೇಳಿದರು.

"ನಮಗೆ ಸ್ವರಾಜ್ಯ ದೊರಕಿತು. ಜೀವನ ಶಿಕ್ಷಣ ಎಂದರೆ ಗಾಂಧೀಜಿಗೆ ತುಂಬಾ ಮೆಚ್ಚುಗೆ. ಹಳ್ಳಿಗಳಲ್ಲಿ ಅದನ್ನು ಕಲಿಸಿಕೊಡುವ ಶಾಲೆಗಳನ್ನು ತೆರೆದರು. ಮಕ್ಕಳು ಕೈ ಕೆಲಸಗಳ ಮೂಲಕ ವಿದ್ಯೆ ಕಲಿಯತೊಡಗಿದರು. ಇದರಿಂದ ಓದು ಕಲಿತ ಹುಡುಗರಿಗೆ ತಮ್ಮ ಕಾಲಮೇಲೆ ನಿಲ್ಲುವ ಬಲ ಬಂತು. ಅವರಿಗೆ ದುಡಿಮೆಯಲ್ಲಿ ಗೌರವ ಹುಟ್ಟಿತು. ಅವರು ಮುಂದಿನ ಜೀವನಕ್ಕೆ ಬೇಕಾದ ಅರಿವು ಶಕ್ತಿಗಳನ್ನು ಗಳಿಸಿದರು."

"1947 ರಲ್ಲಿ ನಮ್ಮ ದೇಶಕ್ಕೆ ಸ್ವರಾಜ್ಯ ದೊರಕಿತು." ರಾಗಣ್ಣ ಮಾತು ಮುಂದುವರಿಸಿದರು. "ಆಗ ದೇಶಕ್ಕೆ ಜಾಕೀರ್‌ಹುಸೇನರ ಅಗತ್ಯ ಹೆಚ್ಚಿತು. ಅವರು ಅಲಿಗಡ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದರು. ರಾಜ್ಯಸಭೆಯ ಸದಸ್ಯರು ಆದರು. ಬಿಹಾರದ ರಾಜ್ಯಪಾಲರೂ ಆದರು. 1962 ರಿಂದ ಐದು ವರ್ಷ ಉಪರಾಷ್ಟ್ರಪತಿಗಳು ಆಗಿ ಇದ್ದರು. ಅನಂತರ ರಾಷ್ಟ್ರಪತಿಗಳು ಆದರು."

Sri Vidyabharathi Book Centre, Sringeri

CC-O. In Public Domain. Digitized by eGangotri

"ಈಗ ಅವರ ಗುಣಗಳ ಬಗ್ಗೆ ಏನೂ ಹೇಳಲೇ ಇಲ್ಲವಲ್ಲ ?" ಎಂದ ಸಿದ್ದಣ್ಣ.

"ಅವರು ತುಂಬಾ ಸರಳ ಜೀವಿಗಳು. ಧರ್ಮದಲ್ಲಿ ಅವರಿಗೆ ತುಂಬಾ ಶ್ರದ್ಧೆ. ಗಾಂಧೀಜಿ "ಈಶ್ವರ ಅಲ್ಲಾತೇರೇ ನಾಮ್" ಎಂದು ಹೇಳಲ್ಲವೇ ? ಜಾಕೀರ್‌ಹುಸೇನರು ಈ ಮಾತನ್ನು ನಂಬಿದ್ದರು. ಅದರಂತೆ ನಡೆದುಕೊಂಡು ಬಂದರು. ತೋಟಗಾರಿಕೆ ಎಂದರೆ ಅವರಿಗೆ ತುಂಬಾ ಪ್ರೀತಿ. ತಮ್ಮ ಮನೆಯಲ್ಲಿ ತಾವೇ ಒಂದು ತೋಟ ಮಾಡಿದ್ದರು. ಅಲ್ಲಿ ಗುಲಾಬಿಗಳನ್ನು ಬೆಳೆಸಿದ್ದಾರೆ. ಅವರು ಬೆಳೆದ ಒಂದು ಗುಲಾಬಿಗೆ ರಾಧಾಕೃಷ್ಣನ್ ಎಂದು ಹೆಸರು ಇಟ್ಟಿದ್ದಾರೆ."

ನಮ್ಮ ದೇಶಕ್ಕೆಲ್ಲಾ ಒಂದು ದೊಡ್ಡ ನ್ಯಾಯಾಲಯ ಇದೆ. ಅದರ ಹೆಸರು ಸುಪ್ರೀಮ್ ಕೋರ್ಟು. ಸುಪ್ರೀಮ್ ಕೋರ್ಟಿಗೆ ಒಬ್ಬ ಮುಖ್ಯ ನ್ಯಾಯಾಧೀಶರು ಇರುವರು. ಈ ನ್ಯಾಯಾಧೀಶರ ಎದುರು ಜಾಕೀರ್‌ಹುಸೇನರು ಪ್ರಮಾಣವಚನ ತೆಗೆದುಕೊಂಡರು. ಅವರಿಗೆ ವಾಸ ಮಾಡಲು ಒಂದು ಭವನ ಇವೆ. ಅದಕ್ಕೆ 'ರಾಷ್ಟ್ರಪತಿ ಭವನ' ಎಂದು ಹೆಸರು. ಯಾವ ಪ್ರಜೆಯಾದರೂ ಸರಿ ಅತನು ದೇಶಕ್ಕೆ ಸಂಬಂಧಿಸಿದ ಮುಖ್ಯ ವಿಚಾರಗಳ ಬಗ್ಗೆ ಅವರಿಗೆ ಕಾಗದ ಬರೆಯಬಹುದು. ಇತರ ದೇಶಗಳೊಡನೆ ಭಾರತ

Sri Vidyabharathi Book Centre, Sringeri

CC-O. In Public Domain. Digitized by eGangotri



ಜಾಕೀರ್‌ಹುಸೇನ್ ಅವರು ಪ್ರಮಾಣವಚನ ಸ್ವೀಕರಿಸಿದರು.

ಸಂಬಂಧ ಬೆಳಸಬೇಕಾಗುವುದು. ಹೀಗೆ ಸಂಬಂಧ ಬೆಳಸುವಾಗ ರಾಷ್ಟ್ರಪತಿಗಳು ನಮ್ಮ ದೇಶದ ಪ್ರತಿನಿಧಿಗಳು.''

''ಜಾಕೀರ್‌ಹುಸೇನರು ನಮ್ಮ ದೇಶದ ಮೂರನೆಯ ರಾಷ್ಟ್ರಪತಿಗಳು. ಮೊದಲನೆಯವರು ರಾಜೇಂದ್ರ ಪ್ರಸಾದರು. ಇವರು ಗಾಂಧೀಜಿಯ ಬಲಗೈ ಆಗಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಎರಡನೆಯವರು ರಾಧಾಕೃಷ್ಣನ್‌ರವರು. ಇವರು ದೊಡ್ಡ ಜ್ಞಾನಿಗಳು. ಮೂರನೆಯವರು ಜಾಕೀರ್‌ಹುಸೇನರು. ಇವರು ಜೀವನ ಶಿಕ್ಷಣದ ಉಪಾಧ್ಯಾಯರು. ನಮ್ಮ ರಾಷ್ಟ್ರಪತಿಗಳನ್ನು ನಾವು ಆದರಿಸಿ ಗೌರವಿಸಬೇಡವೇ ? ಅವರನ್ನು ಗೌರವಿಸುವುದು ಎಂದರೆ ನಮ್ಮ ದೇಶವನ್ನು ಗೌರವಿಸುವಂತೆ. ನಮ್ಮನ್ನು ನಾವೇ ಗೌರವಿಸಿಕೊಂಡಂತೆ. ಏಕೆಂದರೆ ನಮ್ಮದು ಪ್ರಜಾಪ್ರಭುತ್ವ ದೇಶ."

ಎಂದು ರಂಗಣ್ಣನವರು ಜಾಕೀರ್‌ಹುಸೇನರ ವಿಚಾರ ಹೇಳಿ ಮುಗಿಸಿದರು.

ಸಿದ್ದಣ್ಣ "ಸ್ವಾಮಿ, ಜಾಕೀರ್‌ಹುಸೇನರು ಬಹಳ ದೊಡ್ಡವರು. ಅವರು ತೋರಿಸಿದ ದಾರಿಯಲ್ಲಿ ನಾವು ನಡೆಯೋಣ" ಎಂದು ಹೇಳಿದ.

—೦—

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ನಾಗರಿಕತೆಯ ಇತಿಹಾಸ

ಕಥಾಸಂಕಲನ

ಕನ್ನಡ ಪ್ರತಿಭೆ

ಕನ್ನಡ ಪರಂಪರೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು

ತರಿಸಿ ಓದಿರಿ

ಎರಡನೆಯ ಮುದ್ರಣ ೧೯೮೮—೬೦೦೦ ಪ್ರತಿಗಳು

ಬೆಲೆ : ರೂ. ೨-೫೦

ಮುದ್ರಕರು

ಸಭ ಮುದ್ರಣಾಲಯ, ವಾಲ್ಮೀಕಿ ರಸ್ತೆ, ಮೈಸೂರು-570 002

Sri Vidyabharathi Book Centre, Sringeri